ANNEXTURE

STATMENT SHOWING THE NO. OF SHEDS CONSTRUCTED DISTRICTWISE FROM 1984 AND EXPENDITURE INCURRED

Sl. No.	*District*	*No. of Sheds*	*Expenditure*
1.	Bangalore	543	14,09,64,734/-
2.	Tumkur	46	67,96,615/-
3.	Kolar	78	1,44,78,707/-
4.	Mysore	125	2,45,33,279
5.	Shimoga	52	72,45,733
6.	Mandya	34	77,03,579
7.	Hassan	18	26,27,785
8.	Chitradurga	60	85,85,989/-
9.	Mangalore	74	1,22,73,979
10.	Hubli	146	3,03,29,505
11.	North Kanara	44	59,61,015
12.	Gulbarga	37	65,75,294
13.	Bellary	40	55,94,191/-
14.	Raichur	30	39,09,381/-
15.	Belgaum	108	1,87,04,049
16.	Bidar	62	73,34,526
17.	Bijapur	16	28,12,338/-
18.	Mercara	8	14,41,220
	Total	1521	30,78,71,919/-

ಸಿದ್ದಾಪುರ - ಹಳ್ಳಿಹೊಳೆ - ಮುದ್ದೂರು - ಜಡ್ಕಲ್ ರಸ್ತೆ ತೀರಾ ದುಸ್ಥಿತಿಗೊಂಡಿರುವುದು.

977 - ಶ್ರೀ ಬಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮಲೆನಾಡು ಭಾಗದಲ್ಲಿ ಹೆದ್ದಾರಿಯಾಗಿ ರೂಪುಗೊಳ್ಳಬೇಕಾದ ಸಿದ್ದಾಪುರ - ಹಳ್ಳಿಹೊಳೆ - ಮದ್ದೂರು-ಜಡ್ಕಲ್ ರಸ್ತೆ ತೀರಾ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ವಿಚಾರದಲ್ಲಿ ಆಗಾಗ ಸರ್ಕಾರದ ಗಮನ ಸೆಳೆದಿದ್ದರೂ ಸಹ ಸಾಕಷ್ಟು ಪ್ರಗತಿ ಆಗದಿರಲು ಕಾರಣವೇನು

ಇ) ರಸ್ತೆ ಅಭಿವೃದ್ಧಿಗೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದರೂ ಕಾರ್ಯಗತವಾಗದೇ ಇರಲು ಕಾರಣವೇನು

ಈ) ಈ ವಿಚಾರದಲ್ಲಿ ವಿಶೇಷ ಗಮನ ನೀಡಿ ಈಗಲಾದರೂ ತ್ವರಿತವಾಗಿ ಕಾರ್ಯಕೈಗೊಳ್ಳಲಾಗುವುದೇ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಈ ಗ್ರಾಮೀಣ ಮಟ್ಟದ ರಸ್ತೆಯ ಕೆಲವು ಭಾಗಗಳು ದುರಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಕೆಲವು ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ವರ್ಷಂ ಪ್ರತಿ ಕೊಡಲಾಗಿರುವ ನಿಗದಿತ ಅನುದಾನಕ್ಕನುಗುಣವಾಗಿ ಮಾಡಲಾಗುತ್ತಿದೆ.

ಇ) ಲಭ್ಯವಿರುವ ಅನುದಾನದಲ್ಲಿ ಜಿಲ್ಲಾ ಪರಿಷತ್ತಿನ ವತಿಯಿಂದ ಇಲ್ಲಿಯವರೆವಿಗೆ 11.91 ಲಕ್ಷ ರೂ.ಗಳ ವೆಚ್ಚದಲ್ಲಿ ಅತಿ ಕೆಟ್ಟುಹೋದ ಭಾಗಗಳ ದುರಸ್ತಿ ಮತ್ತು ಅಭಿವೃದ್ಧಿಯನ್ನು ಮಾಡಲಾಗಿದೆ. ಹಾಗೂ ಎರಡು ಸೇತುವೆಗಳನ್ನು ನಿರ್ಮಿಸಲಾಗಿದೆ. ಈ ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಿ ಸರ್ವ ರಸ್ತೆಯನ್ನಾಗಿ ಮಾಡುವುದಕ್ಕೆ 94ಲಕ್ಷ ರೂ. ಗಳ ಅಂದಾಜು ಬರುತ್ತದೆ. ಅನುದಾನದ ಕೊರತೆಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣವಾಗಿ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ.

ಈ) ಈ ರಸ್ತೆಯ ಅಭಿವೃದ್ಧಿಯನ್ನು ಜಿಲ್ಲಾ ಪರಿಷತ್ತಿನ ವಿವಿಧ ಕಾರ್ಯಕ್ರಮದಡಿಯಲ್ಲಿ ಹಂತಹಂತವಾಗಿ ತೆಗೆದುಕೊಳ್ಳುವಂತೆ ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಸ್ವಾಂತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸ್.

1318 - ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆಯೇ?

ಆ) ಈ ವಿಚಾರದ ಬಗ್ಗೆ ಈ ಹಿಂದೆ ಸರಕಾರ ಆಶ್ವಾಸನೆ ನೀಡಿರುವುದು ನಿಜವಲ್ಲವೇ?

ಇ) ಈ ಕುರಿತು ಕ್ರಮ ಕೈಗೊಳ್ಳಲಾಗುವುದೆ, ಹಾಗಿದ್ದಲ್ಲಿ, ಯಾವಾಗ?

ಶ್ರೀ. ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು, ವರ್ಷಕ್ಕೆ ಒಂದು ಬಾರಿ ಮಾತ್ರ.

ಆ) ಹೌದು. ಸರ್ಕಾರವು ಸ್ವಾತಂತ್ರ್ಯಯೋಧರ ಮತ್ತು ಅವರ ಅವಲಂಭಿತರೊಬ್ಬರಿಗೆ ರಾಜ್ಯ ಸರ್ಕಾರ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ನಿರ್ಧರಿಸಿತ್ತು.

ಇ) ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಪತಿ ಪತ್ನಿಯವರೊಡನೆ ಕರ್ನಾಟಕ ರಾಜ್ಯದ ಯಾವುದಾದರೂ ಎರಡು ಸ್ಥಳಗಳ ನಡುವೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ವರ್ಷಕ್ಕೊಮ್ಮೆ ಉಚಿತ ಪ್ರಯಾಣ ಮಾಡಲು ಅವಕಾಶ ಕಲ್ಪಿಸಿದೆ.

ವಿಶ್ವೇಶ್ವರಯ್ಯ ನಾಲಾಕಾಮಗಾರಿ ಬಗ್ಗೆ

1105 - ಎನ್. ತಮ್ಮಣ್ಣ (ಕೆರೆಗೋಡು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲೆಯ ಮದ್ದೂರು ಬ್ರಾಂಚಿಗೆ ಸೇರಿದ ಮುಖ್ಯನಾಲೆಯಲ್ಲಿ ಏಳನೇ ಕಿಲೋಮೀಟರ್ 10ನೇ ಕಿಲೋಮೀಟರ್ ಮತ್ತು 15ನೇ ಕಿಲೋಮೀಟರ್‌ನಲ್ಲಿ ಹೊಸದಾರಿ ಸೇತುವೆ ಮಾಡಲು ಸರಕಾರ ಮಂಜೂರು ಮಾಡಿದೆಯೆ

ಆ) ಮಂಜೂರು ಮಾಡಿದ್ದಲ್ಲಿ, ಯಾವಾಗ ಮಂಜೂರು ಮಾಡಿದೆ?